## 39. ಜೂನ್ 8ಕ್ಕೆ ಭಾರತ ಅನ್‌ಲಾಕ್

ಕೊರೊನಾ ವೈರಸ್‌ನಿಂದಾಗಿ ಮಾರ್ಚ್ 25ರಿಂದಲೂ ಲಾಕ್‌ಡೌನ್ ಒಳಗಿರುವ ಭಾರತ, ಮುಂದಿನ ದಿನಗಳಲ್ಲಿ ಹೆಚ್ಚು ಕಡಿಮೆ ಪೂರ್ಣವಾಗಿ ಅನ್‌ಲಾಕ್ ಆಗಲಿದೆ. ಒಟ್ಟು ಮೂರು ಹಂತದಲ್ಲಿ ಲಾಕ್‌ಡೌನ್ ತೆರವು ಮಾಡುವ ಪ್ಲಾನ್ ಹಾಕಿಕೊಳ್ಳಲಾಗಿದೆ. ಮೊದಲ ಹಂತದಲ್ಲಿ ಜೂನ್ 8ರಿಂದ ದೇವಸ್ಥಾನ, ಹೋಟೆಲ್, ಮಾಲ್ ತೆರೆಯಲು ಅವಕಾಶ ನೀಡಲಾಗಿದೆ. 2ನೇ ಹಂತದಲ್ಲಿ ಶಾಲೆ-ಕಾಲೇಜುಗಳ ಶುರುವಿಗೆ ಒಪ್ಪಿಗೆ ಸಿಕ್ಕಿದೆ. ಆದರೂ, ಜೂನ್.30ರವರೆಗೆ ಕಂಟೈನ್‌ಮೆಂಟ್ ಝೋನ್‌ಗಳಲ್ಲಿ ಲಾಕ್‌ಡೌನ್ 5.0 ಮುಂದುವರಿಯಲಿದೆ.

ರಾಜ್ಯಗಳಿಗೆ ಮತ್ತಷ್ಟು ಅಧಿಕಾರ ನೀಡಲಾಗಿದೆ. ಪರಿಸ್ಥಿತಿ ನೋಡಿಕೊಂಡು ಲಾಕ್‌ಡೌನ್ ವಿಸ್ತರಿಸುವ ಅಥವಾ ಸಡಿಲಗೊಳಿಸುವ ನಿರ್ಧಾರವನ್ನು ಆಯಾ ರಾಜ್ಯ ಸರ್ಕಾರಗಳೇ ತೆಗೆದುಕೊಳ್ಳಬಹುದಾಗಿದೆ. ಜೊತೆಗೆ ಕಂಟೈನ್‌ಮೆಂಟ್ ಝೋನ್ ಮತ್ತು ಬಫರ್ ಝೋನ್‌ಗಳನ್ನು ನಿರ್ಧರಿಸುವ ಹೊಣೆಯೂ ರಾಜ್ಯ ಸರ್ಕಾರಗಳದ್ದೇ ಆಗಿದೆ.

**ರಾತ್ರಿ 9ರಿಂದ ಬೆಳಿಗ್ಗೆ 5ರವರೆಗೆ ಕರ್ಫ್ಯೂ:-** ಲಾಕ್‌ಡೌನ್ ತೆರವಾಗಿದ್ದರೂ, ರಾತ್ರಿ ಕರ್ಫ್ಯೂ ಮಾತ್ರ ಮುಂದುವರಿಯುತ್ತದೆ. ಆದರೆ, ಸಮಯ ಬದಲಾಗುತ್ತದೆ. ರಾತ್ರಿ 9ರಿಂದ ಬೆಳಗ್ಗೆ 5 ಗಂಟೆಯವರೆಗೆ ಮಾತ್ರ ನೈಟ್ ಕರ್ಫ್ಯೂ ಜಾರಿಯಲ್ಲಿ ಇರುತ್ತದೆ. ಈ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಜನ ಓಡಾಡುವಂತಿಲ್ಲ. ಆದರೆ ಅತ್ಯಗತ್ಯ ಸೇವೆಗಳಿಗೆ ವಿನಾಯಿತಿ ಇದೆ.

ಈ ಬಾರಿಯೂ ವಯಸ್ಸಾದವರು, ಗರ್ಭಿಣಿಯರು, ಮಕ್ಕಳಿಗೆ ನಿರ್ಬಂಧ ವಿಧಿಸಲಾಗಿದೆ. 65 ವರ್ಷ ಮೇಲ್ಪಟ್ಟವರು, 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಮತ್ತು ಗರ್ಭಿಣಿಯರು ಮನೆಯಿಂದ ಆಚೆ ಬಾರದಂತೆ ಸೂಚಿಸಲಾಗಿದೆ. ಇನ್ನು ಸೋಂಕನ್ನು ಮೊದಲೇ ಗುರುತಿಸುವ ನಿಟ್ಟಿನಲ್ಲಿ ಎಲ್ಲರೂ ಆರೋಗ್ಯ ಸೇತುವನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು ಎಂದಿದೆ.

ಹಂತ 1:- ಜೂನ್ 8ರಿಂದ ದೇಗುಲ, ಮಾಲ್, ಎಲ್ಲಾ ರೀತಿಯ ಧಾರ್ಮಿಕ, ಪೂಜಾ ಸ್ಥಳಗಳು (ದೇವಸ್ಥಾನಗಳು, ಚರ್ಚ್‌ಗಳು, ಮಸೀದಿಗಳು), ಹೋಟೆಲ್, ರೆಸ್ಟೋರೆಂಟ್, ಇತರೆ ಆತಿಥ್ಯ ಸೇವೆಗಳು, ಶಾಪಿಂಗ್ ಮಾಲ್‌ಗಳು.

ಹಂತ 2:- ಜುಲೈನಿಂದ ಶಾಲಾ, ಕಾಲೇಜುಗಳು, ಶೈಕ್ಷಣಿಕ, ತರಬೇತಿ ಸಂಸ್ಥೆಗಳು ಈ ಹಂತದಲ್ಲಿ ರಾಜ್ಯಗಳಿಗೆ ಪರಮಾಧಿಕಾರ. ಆಯಾ ರಾಜ್ಯಗಳು, ಚರ್ಚೆ ನಡೆಸಿ ಅವಕಾಶ ನೀಡಬಹುದಾಗಿದೆ.

ಹಂತ 3:- ಪರಿಸ್ಥಿತಿ ನೋಡಿಕೊಂಡು ಈ ಕೆಳಗಿನ ಚಟುವಟಿಕೆಗಳಿಗೆ ಅನುಮತಿ ನೀಡಬಹುದಾಗಿದೆ. ಅದರೆ ಇದಕ್ಕೆ ಸಮಯದ ಮಿತಿ ಹಾಕಿಲ್ಲ.

- ಅಂತರರಾಷ್ಟ್ರೀಯ ವಿಮಾನಯಾನ / ಮೆಟ್ರೋ ರೈಲು
- ಸಿನಿಮಾ ಮಂದಿರ, ಜಿಮ್‌ಗಳು, ಸ್ವಿಮಿಂಗ್ ಫೂಲ್, ಮನೋರಂಜನಾ ಪಾರ್ಕ್, ಥಿಯೇಟರ್‌ಗಳು, ಆಡಿಟೋರಿಯಂಗಳು, ಅಸೆಂಬ್ಲಿ ಹಾಲ್
- ಸಾಮಾಜಿಕ, ಆರ್ಥಿಕ, ಕ್ರೀಡಾ, ಮನೋರಂಜನಾ, ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಇತರೆ ಅತಿ ಹೆಚ್ಚು ಜನ ಸೇರುವ ಕಾರ್ಯಕ್ರಮಗಳು

**ಕಂಟೈನ್‌ಮೆಂಟ್ ಝೋನ್ ಲಾಕ್:-** ಕೊರೊನಾ ಸೋಂಕು ಇರುವ ಕಂಟೈನ್‌ಮೆಂಟ್ ಝೋನ್‌ಗಳಲ್ಲಿ ಮಾತ್ರ ಲಾಕ್‌ಡೌನ್ 5.0 ಜೂನ್.30 ರವರೆಗೆ ಮುಂದುವರೆಯಲಿದೆ. ಈ ಕಂಟೈನ್‌ಮೆಂಟ್ ಝೋನ್‌ಗಳನ್ನು ಆಯಾ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳು ನಿರ್ಧಾರ ಮಾಡಬೇಕು. ಇದಕ್ಕಾಗಿ ಕೇಂದ್ರ ಆರೋಗ್ಯ ಇಲಾಖೆಯಿಂದ ನಿಯಾಮಾವಳಿಗಳನ್ನು ಪಾಲಿಸಬೇಕು.

**ಅಂತರರಾಜ್ಯ ಓಡಾಟ ಸಲೀಸು:-** ಜೂನ್.1ರಿಂದ ದೇಶದ ಯಾವುದೇ ರಾಜ್ಯಕ್ಕೆ ಬೇಕಾದರೂ, ಯಾವುದೇ ಅನುಮತಿ ಪಾಸ್ ಇಲ್ಲದೆ ಸಂಚರಿಸಬಹುದು. ಹಿಂದೆ ಇದ್ದ ಎಲ್ಲಾ ನಿಬಂಧನೆಗಳನ್ನೂ ಕೇಂದ್ರ ಸರ್ಕಾರ ತೆಗೆದು

ಹಾಕಿದೆ. ರಾಜ್ಯದೊಳಗೆ ಯಾವುದೇ ಅಡೆತಡೆ ಇಲ್ಲದೇ ಓಡಾಟ ನಡೆಸಬಹುದು. ಆದರೆ ಇಲ್ಲೂ ರಾಜ್ಯ ಸರ್ಕಾರಗಳಿಗೆ ಕೆಲವು ಅಧಿಕಾರ ನೀಡಲಾಗಿದೆ. ಆರೋಗ್ಯದ ದೃಷ್ಟಿಯಿಂದ ಜನರ ಓಡಾಟಕ್ಕೆ ನಿರ್ಬಂಧ ವಿಧಿಸುವುದೇ ಆದಲ್ಲಿ, ಒಂದಷ್ಟು ಮುಂಚೆಯೇ ಈ ಬಗ್ಗೆ ಪ್ರಚುರ ಪಡಿಸಿ ನಿರ್ಬಂಧ ಹೇರಬಹುದು. ಶ್ರಮಿಕ ರೈಲುಗಳು, ದೇಶೀಯ ವಿಮಾನಯಾನ ಮುಂದುವರಿಯುತ್ತದೆ. ಹಾಗೆಯೇ ಸರಕು ಸಾಗಣಿಕೆಗೆ ಯಾವುದೇ ರಾಜ್ಯಗಳು ಅಡ್ಡಿಮಾಡುವಂತಿಲ್ಲ ಎಂದು ಕೇಂದ್ರ ಸರ್ಕಾರದ ಹೊಸ ಮಾರ್ಗದರ್ಶಿಯಲ್ಲಿ ಸೂಚಿಸಿದೆ. .

**ಇತರೆ ನಿಯಮಗಳು:–**

- ಫೇಸ್ ಮಾಸ್ಕ್ ಕಡ್ಡಾಯ
- ಕನಿಷ್ಠ 6 ಅಡಿ ಸಾಮಾಜಿಕ ಅಂತರ
- ಮದುವೆಗಳಲ್ಲಿ 50 ಮಂದಿ, ಅಂತ್ಯ ಸಂಸ್ಕಾರದಲ್ಲಿ 20 ಮಂದಿಗೆ ಅವಕಾಶ
- ಸಾರ್ವಜನಿಕ ಸ್ಥಳದಲ್ಲಿ ಉಗುಳಿದರೆ ದಂಡ
- ಸಾರ್ವಜನಿಕ ಸ್ಥಳದಲ್ಲಿ ಮದ್ಯಪಾನ, ಪಾನ್ ಗುಟ್ಕಾ ಸೇವನೆ ನಿಷಿದ್ಧ
- ಸಾಧ್ಯವಾದಷ್ಟೂ ಮನೆಯಿಂದಲೇ ಕೆಲಸ ಮಾಡಿ
- ಕೆಲಸದ ಸ್ಥಳ, ಶಾಪಿಂಗ್ ಕಾಂಪ್ಲೆಕ್ಸ್, ವಾಣಿಜ್ಯ ಸಂಕೀರ್ಣಗಳಲ್ಲಿ ಶಿಫ್ಟ್ ರೀತಿಯಲ್ಲಿ ಕೆಲಸ ಮತ್ತು ವ್ಯವಹಾರ ನಡೆಸುವುದು
- ಆರಂಭ ಮತ್ತು ಎಕ್ಸಿಟ್ ಪಾಯಿಂಟ್‌ಗಳಲ್ಲಿ ಥರ್ಮಲ್ ಸ್ಕ್ರೀನಿಂಗ್ ವ್ಯವಸ್ಥೆ ಮತ್ತು ಸ್ಯಾನಿಟೈಸರ್ ಮೂಲಕ ಶುಚಿತ್ವಕ್ಕೆ ಮನ್ನಣೆ ನೀಡಬೇಕು
- ಕೆಲಸದ ಸ್ಥಳಗಳನ್ನು ಆಗಾಗ್ಗೆ ಸ್ಯಾನಿಟೈಸರ್‌ನಿಂದ ಶುದ್ಧಗೊಳಿಸಬೇಕು
- ಕೆಲಸದ ಸ್ಥಳಗಳಲ್ಲಿ ಶಿಫ್ಟ್, ಊಟದ ವೇಳೆಯಲ್ಲಿ ಸಾಮಾಜಿಕ ಅಂತರ ಕಾಪಾಡಿಕೊಳ್ಳಬೇಕು

ಕೊರೊನಾ ಹಿನ್ನೆಲೆಯಲ್ಲಿ ಮುಚ್ಚಲಾಗಿದ್ದ ದೇವಸ್ಥಾನಗಳನ್ನು ತೆರೆಯಲು ಈಗಾಗಲೇ ರಾಜ್ಯ ಸರ್ಕಾರ ಅನುಮತಿ ಕೊಟ್ಟಾಗಿದೆ. ಇದರ ಬೆನ್ನಲ್ಲೆ ದೇಗುಲ ತೆರೆಯಲು ಮತ್ತು ದೇಗುಲಕ್ಕೆ ಬರುವ ಭಕ್ತರಿಗೆ ಕೆಲವೊಂದು ನಿರ್ದೇಶನ ನೀಡಲಾಗಿದೆ. ಈ ಬಗ್ಗೆ ದೇವಸ್ಥಾನ ಆಡಳಿತ ಮಂಡಳಿಗಳಿಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸರ್ಕಾರ ಸೂಚನೆ ನೀಡಿದೆ. ಭಕ್ತರು ಒಳಬರುವ ಹಾಗೂ ಹೊರಹೋಗುವ ಮಾರ್ಗಗಳಿಗೆ ಸೋಂಕುನಾಶಕ ಸಿಂಪಡಿಸುವುದು. ಅಗತ್ಯಬಿದ್ದರೆ 2 ತಿಂಗಳ ಮಟ್ಟಿಗೆ ಹೆಚ್ಚುವರಿ ಭದ್ರತಾ ಸಿಬ್ಬಂದಿ ನೇಮಕ, ವೇತನವನ್ನು ತಾವೇ ಭರಿಸುವುದು. ದೇವಾಲಯದ ನೌಕರರು ಹಾಗೂ ಆಡಳಿತ ಮಂಡಳಿ ಕಡ್ಡಾಯವಾಗಿ ಸ್ಯಾನಿಟೈಸರ್ ಬಳಸಬೇಕು. ಅರ್ಚಕರು, ಪರಿಚಾರಕರು ಹಾಗೂ ಆಗಮಿಕರು ದೇವಾಲಯದ ಒಳಾಂಗಣದಲ್ಲಿ ಹೊರತುಪಡಿಸಿ ಉಳಿದೆಡೆ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ದೇಗುಲ ಪ್ರವೇಶಿಸುವವರಿಗೆ ಕಡ್ಡಾಯವಾಗಿ ಥರ್ಮಲ್ ಸ್ಕ್ಯಾನ್ ಮಾಡಬೇಕು. ಹೆಚ್ಚು ಉಷ್ಣತೆ ಕಂಡುಬಂದಲ್ಲಿ ದೇಗುಲಕ್ಕೆ ಪ್ರವೇಶ ನಿರಾಕರಿಸುವುದು. ಈ ಬಗ್ಗೆ ಗೋಡೆಗಳಲ್ಲಿ ಜಾಗೃತಿ ಫಲಕ ಹಾಕಬೇಕು. ಸರತಿ ಸಾಲುಗಳಲ್ಲೂ 1 ಮೀಟರ್ ಅಂತರ ಕಡ್ಡಾಯ, ಆಡಳಿತ ಮಂಡಳಿಗಳೇ ಮಾರ್ಕ್ ಮಾಡಬೇಕು ಎಂದು ಧಾರ್ಮಿಕ ದತ್ತಿ ಇಲಾಖೆ ಮಾರ್ಗಸೂಚಿ ನೀಡಿರುತ್ತದೆ.

ಆಧಾರ:ಉದಯವಾಣಿ, ದಿನಾಂಕ:31.05.2020